# ಟ್ವೀಟ್



**ಕಿರಣ್ ಕೆ. ಎಸ್**
ಸಾಮಾಜಿಕ ಜಾಲತಾಣ ವಿಮರ್ಶಕ
@KiranKS



ಏನಾದರೂ ಕೇಜ್ರಿವಾಲರ ಜನ್ ಲೋಕ್ ಪಾಲ್ ಇಂದು ಕಾನೂನಾಗಿದ್ದರೆ, ಕೇಜ್ರಿ ಮತ್ತು ಸತ್ಯೇಂದ್ರ ಜೈನ್ (ಲಂಚ ಕೊಟ್ಟ ಆರೋಪ) ಇಬ್ಬರೂ ಸೆರೆಮನೆ ಸೇರುತ್ತಿದ್ದರು. ಆಪಾದನೆ ಮಾಡಿದ ಕಪಿಲ್ ಮಿಶ್ರಾರಿಗೆ 20 ಲಕ್ಷ ರೂಪಾಯಿ ಬಹುಮಾನ ಸಿಗುತ್ತಿತ್ತು, ಅದೇ ಲೋಕ್ ಪಾಲ್ ಅಡಿಯಲ್ಲಿ!

ಶೇಖರ್ ಗುಪ್ತಾ
@ShekharGupta



ವಿಷಾದದ ದಿನ. ಸುನಂದಾ ಕೊಲೆ ಟೇಪ್ ಕುರಿತು ನಾನು ಪ್ರಶ್ನೆ ಕೇಳಲು ಹೋದಾಗ ಶಶಿ ತರೂರ್ ಕಡೆಯ ಗೂಂಡಾಗಳು ನನ್ನ ಮೇಲೆ ಹಲ್ಲೆ ನಡೆಸಿದರು, ಗುದ್ದಿದರು, 'ಎಳೆದಾಡಿದರು. ಕೇವಲ ಪ್ರಶ್ನೆಗಳನ್ನು ಕೇಳಿದ್ದಕ್ಕೆ. ಸಾಂಸದ ಶಶಿ ಸುಮ್ಮನೆ ನೋಡುತ್ತಿದ್ದರು.

ಆದಿತ್ಯ ರಾಜ್ ಕೌಲ್
@AdityaRajKau



ಹಿಂದಿ ಮತ್ತು ಆಂಗ್ಲ ಭಾಷೆಗಳನ್ನು ಮಾತ್ರ ರೈಲು ಟಿಕೆಟ್ ಗಳಲ್ಲಿ ಮುದ್ರಿಸುತ್ತಿರುವ ಬಗ್ಗೆ ಬಿಸಿ ಬಿಸಿ ಚರ್ಚೆ ಉಂಟಾಗಿದೆ. ನನಗೆ ಅರ್ಥವಾಗುತ್ತಿಲ್ಲ. ಇಂದಿರುವ ತತ್ರಾಂಶ ತಂತ್ರಜ್ಞಾನ ಉಪಯೋಗಿಸಿ, ಪ್ರಯಾಣಿಕ ಕೇಳಿದ ಭಾಷೆಯಲ್ಲಿ ಟಿಕೆಟ್ ಮುದ್ರಿಸಿದರಾಯಿತು. ಆಗ ಎಲ್ಲಾ ಭಾಷೆಯವರು ಸಂತೋಷದಿಂದ ಪ್ರಯಾಣ ಮಾಡಬಹುದು

ದೀಪ್ತಿ ನೈನ್ವಾಲ್
@deepti_nainwal



ಒಂದೇ ಒಂದು ಮಸೀದಿ ಅಥವಾ ಚರ್ಚ್ ಕರ್ನಾಟಕ ಸರ್ಕಾರದ ಅಧೀನದಲ್ಲಿ ಇಲ್ಲ ಎಂದು ಕರ್ನಾಟಕದ ಅಲ್ಪಸಂಖ್ಯಾತ ಇಲಾಖೆ ಸ್ಪಷ್ಟೀಕರಿಸಿದೆ. ಆದರೆ ಅದೇ ಸಮಯದಲ್ಲಿ ಕರ್ನಾಟಕ ಸರ್ಕಾರ 34,560 ದೇವಸ್ಥಾನಗಳನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡಿದೆ!

ಗಿರೀಶ್ ಭಾರದ್ವಾಜ್
@Girishvhp

## ಈ ವಾರದ ಪ್ರಮುಖ ಚರ್ಚೆಗಳು

ಪಲ್ಲವಿ ಘೋಷ್ ಎನ್ನುವ ಟಿವಿ ಪತ್ರಕರ್ತೆ ಉತ್ತರ ಪ್ರದೇಶದಲ್ಲಿ ದನದ ಮಾಂಸದ ಕಾರಣದಿಂದ ಒಬ್ಬ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರವಾಯಿತು ಎಂದು ಟ್ವೀಟಿಸಿದರು. ಅದಕ್ಕೆ ಖಾರವಾಗಿ ಪ್ರತಿಕ್ರಿಯಿಸಿದ ಉ.ಪ್ರ. ಪೋಲೀಸ್ ಇಲಾಖೆ 'ನಿಮ್ಮ ಟ್ವೀಟ್ ಕಾಲ್ಪನಿಕವಾಗಿದೆ. ನಾವು ಅಂತಹ ಯಾವ ಘಟನೆಯನ್ನೂ ಇಲ್ಲಿ ಕಂಡಿಲ್ಲ. ನಿಮಗೆ ಹೆಚ್ಚಿನ ವಿಷಯ ತಿಳಿದಿದ್ದರೆ ನಮಗೆ ತಿಳಿಸಿ, ಎಂದು ಮರು ಟ್ವೀಟ್ ಮಾಡಿದರು. ಇದಾದ ನಂತರ ಸುಳ್ಳು ಸುದ್ದಿಯನ್ನು ಹಾಕಿದ ಪಲ್ಲವಿ ಸಾವಿರಾರು ಜನರ ಆಕ್ರೋಶಕ್ಕೆ ಗುರಿಯಾದರು.

ಮುಜೈದ್ ಆಲಮ್ ಎನ್ನುವವರು ಒಂದು ಚಿತ್ರವನ್ನು ಹಾಕಿ 'ಜಮ್ಮು ಕಾಶ್ಮೀರದ ಭಯೋತ್ಪಾದಕರು ಆಗಾಗ್ಗೆ ನಮ್ಮ ಹಳ್ಳಿಗಳಿಗೆ ಬಂದು ಚಿಕ್ಕ ಹುಡುಗರನ್ನು ತಮ್ಮ ಜೊತೆಗೂಡುವಂತೆ ಒತ್ತಾಯಿಸುತ್ತಾರೆ. ಆಗ ನಮ್ಮ ತಾಯಂದಿರ ಮತ್ತು ಅಕ್ಕ ತಂಗಿಯರ ಮುಖಗಳಲ್ಲಿ ಅತ್ಯಂತ ಭಯ ಭೀತವಾದ ಭಾವನೆಗಳು ಕಂಡು ಬರುತ್ತವೆ. ಅದನ್ನು ಯಾಕೆ ಯಾವ ಮಾಧ್ಯಮದವರೂ ತೋರಿಸುವುದಿಲ್ಲ?' ಎಂಬ ಗಂಭೀರ ಪ್ರಶ್ನೆಯನ್ನು ಮುಂದಿಟ್ಟರು.

ಕೂಲ್ ಫನ್ನಿ ಟೀ ಶರ್ಟ್ ಎನ್ನುವ ಹಾಸ್ಯ ಕೊಂಡಿಯು ಹೀಗೆಂದಿತು.

'ಬರ್ಖಾ ದತ್: ಈಗೇನು ಮಾಡುವುದು? ಅರ್ನಬ್ ಗೋಸ್ವಾಮಿ ಲಾಲು ಯಾದವ್ ಅವರ ಗಾಂಗ್ ಲೀಡರ್ ಜೊತೆಗಿನ ಸಂಪರ್ಕವನ್ನು ಸಂಪೂರ್ಣವಾಗಿ ಬಯಲು ಮಾಡುತ್ತಿದ್ದಾರೆ.

ರಾಜ್ ದೀಪ್ ಸರ್ದೇಸಾಯಿ: ಹೀಗೆ ಮಾಡೋಣ. ನನ್ನ ಮನೆಯ ಮುಂದೆ ಇಬ್ಬರು ಜಗಳವಾಡುತ್ತಿದ್ದಾರೆ. ಒಂದು ಹಸು ತೆಗೆದುಕೊಂಡು ಬನ್ನಿ. ಒಂದು ಗೋರಕ್ಷಕ ಹಲ್ಲೆ ಕಥೆ ಕಟ್ಟೋಣ!

ನೀಟ್ ಪರೀಕ್ಷೆಯನ್ನು ಬರೆಯುವ ಪರೀಕ್ಷಾರ್ಥಿಗಳಿಗೆ ಹಲವು ಬಿಗಿ ಕಾನೂನುಗಳನ್ನು ರಚಿಸಲಾಗಿತ್ತು. ಇದರ ಬಗ್ಗೆ ಪ್ರತಿಕ್ರಿಯಿಸಿದ ಹೇಮಾ ದೊರೆಸ್ವಾಮಿ ಎನ್ನುವವರು 'ನನ್ನ ಓರಗಿತ್ತಿ ನೀಟ್ ಪರೀಕ್ಷೆಯಲ್ಲಿ ಮೇಲ್ವಿಚಾರಕಿಯಾಗಿದ್ದಾರೆ. ನೂರಾರು ಸೂಚನೆಗಳು, ತಲೆಕೆಟ್ಟ ನಿಯಮಗಳು. ಈ ಬಾರಿಯ ನೀಟ್ ಪರೀಕ್ಷೆ ವಿದ್ಯಾರ್ಥಿಗಳಿಗೆ, ಪೋಷಕರಿಗೆ ಮತ್ತು ಪರೀಕ್ಷಕರಿಗೆ ತಲೆನೋವು ಉಂಟು ಮಾಡಿದೆ.' ಎಂದು ಟ್ವೀಟ್ ಮಾಡಿದರು.